ಡಿಡಬ್ಲ್ಯೂ-2
ಓ ಎಸ್ 42/2014

ದಿನಾಂಕಃ 03-11-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

ಮುಂದುವೆರೆದ ಪಾಟೀ ಸವಾಲುಃ ಶ್ರೀ ಬಿ ಎನ್ ಆರ್ ವಾದಿಗಳ ಪರ ವಕೀಲರಿಂದಃ 6. ನಾನು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆ ಜನ್ಮ ದಿನಾಂಕವನ್ನು ಬರೆಸಿರುತ್ತಾರೆ. ಏನು ದಾಖಲೆ ನೀಡಿ ಬರೆಸಿರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ, ನನ್ನ ತಂದೆಗೆ ಗೊತ್ತು. ಚೆನ್ನಬಸಪ್ಪನಿಗೆ ಪಡಿತರ ಚೀಟಿ ಇತ್ತು ಅಂದರೆ ನನಗೆ ಗೊತ್ತಿಲ್ಲ. ನನ್ನ ಹೆಸರಿನಲ್ಲಿರುವ ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿ ನನ್ನ, ಪತ್ನಿ ಮತ್ತು ಮಕ್ಕಳ ಹೆಸರು ಇದೆ ಅಂದರೆ ಸರಿ. ಚೆನ್ನಬಸಪ್ಪನ ಪಡಿತರ ಚೀಟಿಯಲ್ಲಿ ಅವರ, ಅವರ ಪತ್ನಿ ಮತ್ತು ಮಕ್ಕಳ ಹೆಸರು ನಮೂದಾಗಿರುತ್ತದೆ ಅಂದರೆ ಇರಬಹುದು, ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ ಕಾರ್ಡನ್ನು ನನ್ನ ಮಕ್ಕಳು ಬರೆಸಿರುತ್ತಾರೆ, ಏನು ದಾಖಲೆ ನೀಡಿರುತ್ತಾರೆ ಅನ್ನುವುದು ಗೊತ್ತಿಲ್ಲ. ನಾವು ಹಾಜರು ಪಡಿಸಿರುವ ದಾಖಲಾತಿಗಳಲ್ಲಿ ತಂದೆಯ ಹೆಸರು ಚೆನ್ನಬಸಪ್ಪ ಎಂದು ನಾವು ಮಾಹಿತಿ ನೀಡಿರುತ್ತೇವೆ ಅಂದರೆ ಸರಿ, ನನ್ನ ತಂದೆ ಚೆನ್ನಬಸಪ್ಪ ಆದ್ದರಿಂದ ಮಾಹಿತಿ ನೀಡಿರುತ್ತೇವೆ.

7. ನಿಲವಂಜಿ ಗ್ರಾಮದ ಆಸ್ತಿಗಳಲ್ಲಿ 1982 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನನ್ನ ತಂಗಿ ಗಂಗಮ್ಮನನ್ನು ಸದರಿ ಪಾಲು ವಿಭಾಗಕ್ಕೆ ಸೇರಿಸಿರುವುದಿಲ್ಲ. ಹರಪನಹಳ್ಳಿ ನ್ಯಾಯಾಲಯದ ಅಸಲು ದಾವೆ 32/2011 ರಲ್ಲಿ ನನ್ನ ಮತ್ತು ನನ್ನ ಪರವಾಗಿ ಈ ನ್ಯಾಯಾಲಯದಲ್ಲಿ ನನ್ನ ಪರವಾಗಿ ಹಾಜರಾಗಿರುವ ಬಸವರಾಜ ವಕೀಲರೇ ಹಾಜರಾಗಿದ್ದರು ಅಂದರೆ ಸರಿ. ನಿಲವಂಜಿ ಗ್ರಾಮ ಮನೆ ಸಂಖ್ಯೆ 154/ಎ ಮೂಲತಃ ಗ್ರಾಮ ಪಂಚಾಯತಿಗೆ ಸೇರಿತ್ತು ಅಂದರೆ ಸರಿ. ಈ ಆಸ್ತಿಯುನ್ನು ಗ್ರಾಮ ಪಂಚಾಯುತಿಯು ಮಹೇಶಪ್ಪನಿಗೆ

ನೀಡಿರುತ್ತದೆ ಅಂದರೆ, ಅರ್ಧ ಭಾಗ ನೀಡಿದ್ದರು, ಇನ್ನರ್ಧ ಬಸಪ್ಪನಿಗೆ ನೀಡಿರುತ್ತಾರೆ. ಮಹೇಶಪ್ಪನಿಗೆ 154/ಎ ಆಸ್ತಿಯನ್ನು ನೀಡಿ ನಂತರ ಬಸಪ್ಪನಿಗೆ 154/ಬಿ ಆಸ್ತಿ ನೀಡಿದ್ದಾರೆ ಅಂದರೆ ಯಾವ ಸಂಖ್ಯೆ ಅನ್ನುವುದು ಗೊತ್ತಿಲ್ಲ ಆದರೆ ಅರ್ಧ ಅರ್ಧ ಭಾಗ ನೀಡಿದ್ದಾರೆ. ಆದ್ದರಿಂದ ದೇವಕ್ಕನಿಗೆ ಮರಣಶಾಸನದ ಮೂಲಕ ನೀಡಲು ನನ್ನ ತಂದೆ ಬಸಪ್ಪನಿಗೆ ಅಧಿಕಾರವಿರಲಿಲ್ಲ ಅಂದರೆ ಸರಿಯಲ್ಲ, ಅವರಿಗೆ ಮಕ್ಕಳು ಇಲ್ಲದ ಕಾರಣ ನನ್ನ ಪತ್ನಿಯ ಹೆಸರಿಗೆ ಮಾಡಿದ್ದಾರೆ. ನನ್ನ ಪತ್ನಿ ಬಸಪ್ಪನನ್ನು ನೋಡಿಕೊಳ್ಳುತಿದ್ದರು ಅನ್ನುವ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ಬರೆಸಿದ್ದೇನೆ . ನಾನು 2001 ರಿಂದ 2006 ರವರೆಗೆ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿದ್ದೆನು ಅಂದರೆ ಸರಿ. ನಾನು ಅಧ್ಯಕ್ಷನಾಗಿದ್ದ ಸಮಯದಲ್ಲಿ ಮಹೇಶಪ್ಪನವರ ಹೆಸರಿಗೆ ಇದ್ದ ಮನೆ ಸಂಖ್ಯೆ 154/ಎ ನ್ನು ಹುಣಸೆ ಕಟ್ಟಿ ಬಸಪ್ಪ ತಂದೆ ಗುರುಬಸಪ್ಪ ಇವರ ಹೆಸರಿಗೆ ತಿದ್ದುಪಡೆ ಮಾಡಿಸಿದ್ದೇನೆ ಅಂದರೆ ಸರಿಯಲ್ಲ. ಆನಂತರ ಬಸಪ್ಪನ ಹೆಸರಿನ ಜಾಗದಲ್ಲಿ ದೇವಕ್ಕ ಗಂಡ ಸಿದ್ದಪ್ಪ ವಿಲ್ಲುನಾಮೆ ಪ್ರಕಾರ ಎಂದು ಬರೆಯಲಾಗಿದೆ ಅಂದರೆ ಸರಿ. ಆನಂತರ ಜೋಳದ ಕೂಡ್ಲಿಗಿ ಮಹೇಶಪ್ಪನ ಹೆಸರಿಗೆ ಮನೆ ಸಂಖ್ಯೆ 154/ಬಿ ನ್ನು ತಿದ್ದುಪಡೆ ಮಾಡಿಸಿದ್ದೇನೆ ಅಂದರೆ, ನಾನು ಮಾಡಿಸಿಲ್ಲ.

8. 1990 ರಿಂದ 1993 ವರೆಗೆ ಮನೆ ಸಂಖ್ಯೆ 154/ಎ ಮತ್ತು ಮನೆ ಸಂಖ್ಯೆ 154/ಬಿ ಬೆಣ್ಣೆಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಅಸ್ತಿತ್ವದಲ್ಲಿರಲಿಲ್ಲ ಅಂದರೆ ಸರಿಯಲ್ಲ. ಜೋಳದ ಕೂಡ್ಲಿಗಿ ಮಹೇಶಪ್ಪ ಮತ್ತು ಆತನ ತಂದೆ ಚೆನ್ನಬಸಪ್ಪ ಇವರಿಗೆ ಹುಣಸಿಕಟ್ಟೆ ಬಸಪ್ಪ ಸಂಬಂಧಿಕನಲ್ಲ ಅಂದರೆ ಸರಿ. ಮನೆ ಸಂಖ್ಯೆ 154/ಎ ಮತ್ತು ಮನೆ ಸಂಖ್ಯೆ 154/ಬಿ ಆಸ್ತಿಗಳು ಬೇರೆ ಬೇರೆ ಮನೆತನಕ್ಕೆ ಸಂಬಂದಪಟ್ಟಿರುತ್ತವೆ ಅಂದರೆ ಸರಿ. ಹುಣಸಿಕಟ್ಟೆ ಬಸಪ್ಪ ತಪ್ಪಾಗಿ ಮನೆ ಸಂಖ್ಯೆ 154/ಬಿ ಆಸ್ತಿಯನ್ನು ವಿಲ್ಲುನಾಮೆ ಮಾಡುವ ಬದಲಾಗಿ ಮನೆ ಸಂಖ್ಯೆ 154/ಎ ಆಸ್ತಿಯನ್ನು ಸೇರಿಸಿದ್ದಾರೆ ಅಂದರೆ ಗೊತ್ತಿಲ್ಲ. ಆದ್ದರಿಂದ ನನಗಾಗಲಿ ಮನೆ ಸಂಖ್ಯೆ 154/ಎ ಆಸ್ತಿಯ ಮೇಲೆ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ.

ಡಿಡಬ್ಲ್ಯೂ-2
ಓ ಎಸ್ 42/2014

9. ನನ್ನ ಸಹೋದರಿ ಗಂಗಮ್ಮ ನನ್ನ ಮತ್ತು ಮಹೇಶಪ್ಪನ ಮೇಲೆ ಹರಪನಹಳ್ಳಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ 55/2018 ರಂತೆ ದಾವೆ ದಾಖಲಿಸಿದ್ದಾರೆ ಅಂದರೆ ಸರಿ. ಆ ದಾವೆಯು ದಿನಾಂಕಃ 27.09.2022 ರಂದು ವಜಾಗೊಂಡಿದೆ ಅಂದರೆ ಇರಬಹುದು. ದಿನಾಂಕಃ 26.05.1948 ರಂದು ಸರ್ವೆ ನಂಬರ 272 ಆಸ್ತಿಯನ್ನು ಮಹೇಶಪ್ಪನ ಹೆಸರಿನಲ್ಲಿ ಬೆಣಿಹಳ್ಳಿ ವೀರಭದ್ರಪ್ಪನ ಮಗ ಚೆನ್ನಬಸಪ್ಪ ಮೈನರ್ ಗಾರ್ಡಿಯನ್ ಮಹೇಶಪ್ಪನ ಪರವಾಗಿ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ, ನನ್ನ ತಾಯಿಯ ಮಹೇಶಪ್ಪನ ಪರವಾಗಿ ಖರೀದಿ ಮಾಡಿದ್ದರು. ನಾನು ಈಗ ಆರೋಗ್ಯದಿಂದ ಇದ್ದೇನೆ ಅಂದರೆ ಸರಿ. ನಾನು ಮೂಲತಃ ವ್ಯವಸಾಯಗಾರ ಅಂದರೆ ಬೆಣ್ಣೆ ವ್ಯಾಪಾರ ಮಾಡುತ್ತೇನೆ. ಬೆಣ್ಣೆ ವ್ಯಾಪಾರ ಮಾಡಲು ಪರವಾನಿಗೆ ಹೊಂದಿರುವುದಿಲ್ಲ.

10. ನಿಡಿ 25 ನ್ನು ಮಾಡುವ ಸಮಯಕ್ಕೆ ಸರ್ವೆ ನಂಬರ 272 ಆಸ್ತಿಯು ಮಹೇಶಪ್ಪನ ಹೆಸರಿಗೆ ಇತ್ತು ಅಂದರೆ ಸರಿ. ಈ ಪತ್ರವನ್ನು ನಾನೇ ಮಾಡಿಕೊಂಡಿದ್ದು , ಮಹೇಶಪ್ಪ ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ಈ ಪತ್ರವನ್ನು ನಾನು ಮತ್ತು ಮಹೇಶಪ್ಪ ಚೆನ್ನಬಸಪ್ಪನ ಮಕ್ಕಳು ಎಂದು ತೋರಿಸಲು ಮತ್ತು ದಾವಾ ಆಸ್ತಿಗಳನ್ನು ಹೊಡೆದುಕೊಳ್ಳಲು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ನಿಡಿ 25 ಪತ್ರಕ್ಕೂ ಮತ್ತು ಮಹೇಶಪ್ಪನಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ನನಗೆ ಸರ್ವೆ ನಂಬರ 272 ರ ಮೇಲೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರೂ ಸಹ ನಿಡಿ 25 ರಲ್ಲಿ ಸೇರಿಸಿ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಾನು ಜೋಳದ ಕೂಡ್ಲಿಗಿ ಚೆನ್ನಬಸಪ್ಪನ ಮಗ ಅಲ್ಲ ಅಂದರೆ ಸರಿಯಲ್ಲ. ನನ್ನ ತಂದೆ ಹುಣಸಿಕಟ್ಟೆ ಬಸಪ್ಪ ಅಂದರೆ ಸರಿಯಲ್ಲ. ಹುಣಸಿಕಟ್ಟೆ ಬಸಪ್ಪ ನನ್ನ ತಂದೆಯಾಗಿರುವುದರಿಂದ ನನ್ನ ಪತ್ನಿ ಅಂದರೆ ಅವರ ಸೊಸೆಗೆ ವಿಲ್ಲುನಾಮೆ ಮಾಡಿದ್ದಾರೆ ಅಂದರೆ ಸರಿಯಲ್ಲ , ಬಸಪ್ಪನನ್ನು ನೋಡಿಕೊಳ್ಳುತಿದ್ದರಿಂದ ಮತ್ತು ಅವರಿಗೆ ಮಕ್ಕಳು ಇಲ್ಲದ ಕಾರಣ ನನ್ನ ಪತ್ನಿಯ ಹೆಸರಿಗೆ ವಿಲ್ಲುನಾಮೆ ಮಾಡಿದ್ದಾರೆ. ಹರಪನಹಳ್ಳಿ ನ್ಯಾಯಾಲಯದಲ್ಲಿ ದಾವೆಗಳು ವಜಾಗೊಂಡ ನಂತರ

ಡಿಡಬ್ಲ್ಯೂ-2
ಓ ಎಸ್ 42/2014

ದಾವಾ ಅಸ್ತಿಗಳನ್ನು ಹೊಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.